Mr. Speaker : It is a very serious matter. Responsible Members of this House, ಏನು ಹೇಳುತ್ತಿದ್ದಾರೆಂದರೆ ಅಲ್ಲಿ ಕೆಲವು ಅವ್ಯವಹಾರಗಳು ನಡೆದಿವೆ ಎಂದು ಹೇಳಿ ಒಂದು ಕಮಿಟಿ ಕಾನ್ಸಿಟಿಟ್ಯೂಟ್ ಮಾಡಬೇಕು ಎಂದು ಹೇಳಿ ಜಿಲ್ಲಾಪರಿಷತ್ತಿನಲ್ಲಿ ತೀರ್ಮಾನ ಆಗಿದೆ. ಅವರು ಎನ್‌ಕ್ವಾಯರಿ ಕಮೆನ್ಸ್ ಮಾಡುವ ಮೊದಲೇ ಅಲ್ಲಿ ಶಾರ್ಟ್ ಸರ್ಕ್ಯೂಟ್ ಆಗಿದೆ ಹಾಗೂ ಬೆಂಕಿ ಬಿದ್ದಿದೆ ಎಂದು ಹೇಳಿದರೆ, ಪತ್ರಿಕೆಗಳಲ್ಲಿ ನೋಡಿದ್ದೇನೆ, ವರದಿ ತರಿಸಿಕೊಡುತ್ತೇನೆ ಎಂದು ಹೇಳಿದರೆ....it is a very serious matter,

ಶ್ರೀ ಕೆ. ಎಸ್. ಈಶ್ವರಪ್ಪ : ಇದನ್ನು ಸಿ.ಓ.ಡಿ. ತನಿಖೆ ಮಾಡುತ್ತೇವೆಂದು ಹೇಳಲಿ.

ಯ) ಕೋಲಾರ ಜಿಲ್ಲೆಯಲ್ಲಿ ದ್ವಿಚಕ್ರ ವಾಹನ ಚಾಲಕರನ್ನು ಅಡ್ಡಗಟ್ಟಿ ಮಾಡುತ್ತಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಮ್ಮ ಕೋಲಾರ ಜಿಲ್ಲೆಯಲ್ಲಿ ಧಾರುಣವಾದ ಒಂದು ಘಟನೆ ನಡೆದಿದೆ. ರಾಷ್ಟ್ರೀಯ ಹೆದ್ದಾರಿ ಏಳು ಮತ್ತು ಗೌರಿಬಿದನೂರು ರಸ್ತೆಯಲ್ಲಿ ದ್ವಿಚಕ್ರ ವಾಹನಗಳಲ್ಲಿ ಹೋಗುತ್ತಾ ಇರತಕ್ಕಂಥವರನ್ನು ಅಡ್ಡಗಟ್ಟಿ ಭೀಕರವಾಗಿ ಕೊಲೆ ಮಾಡಿರುವಂಥದ್ದು ವರದಿಯಾಗಿದೆ. ರಾಷ್ಟ್ರೀಯ ಹೆದ್ದಾರಿ ಏಳು ಮತ್ತು ಚಿಕ್ಕಬಳ್ಳಾಪುರ ಗೌರಿಬಿದನೂರು ರಸ್ತೆಯಲ್ಲಿ ಸಂಜೆ ಹೊತ್ತು ದ್ವಿಚಕ್ರ ವಾಹನದಲ್ಲಿ ಹೋಗುತ್ತಾ ಇದ್ದಂಥ ಶಿಕ್ಷಕರಾದ ಈಶ್ವರಪ್ಪ ಮತ್ತು ಟಿ. ಎ. ಪಿ. ಸಿ. ಎಂ. ಎನ. ಸದಸ್ಯ ರಾಮಕೃಷ್ಣಪ್ಪ ಎನ್ನುವಂಥವರನ್ನು ಕೊಲೆ ಮಾಡಿದ್ದಾರೆ. ಇಬ್ಬರು ದಂಪತಿಗಳ ಮೇಲೆ ಹಲ್ಲೆ ಮಾಡಲಾಗಿದ್ದು ಅವರನ್ನು ಈಗ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಒಂದೇ ದಿವಸ ನಾಲ್ಕು ಕಡೆ ದ್ವಿಚಕ್ರ ವಾಹನಗಳ ಮೇಲೆ ಹೋಗುತ್ತಾ ಇರತಕ್ಕಂಥವರ ಮೇಲೆ ಹಲ್ಲೆ ನಡೆಸಿದ್ದಾರೆ. ಇಬ್ಬರು ಸ್ಥಳದಲ್ಲಿಯೇ ಸತ್ತಿದ್ದಾರೆ. ಇದು ಕೋಲಾರ ಜಿಲ್ಲೆಯಲ್ಲಿ ವ್ಯಾಪಕವಾಗಿ ನಡೆದಿರತಕ್ಕಂಥ ಘಟನೆ. ಕೋಲಾರ ಜಿಲ್ಲೆಯಲ್ಲಿ ಚಿಂತಾಮಣಿಯಲ್ಲಿ ಮದನಪಲ್ಲಿಗೆ ಹೋಗುತ್ತಾ ಇರತಕ್ಕಂಥ ರಸ್ತೆನಲ್ಲಿ ಕಳೆ ನಾಲ್ಕೈದು ತಿಂಗಳುಗಳಿಂದ ಏಳೆಂಟು ಜನರನ್ನು ಸಾಯಿಸಿದ್ದಾರೆ. ಚಿಂತಾಮಣಿಯಿಂದ ಶ್ರೀನಿವಾಸಪುರದಲ್ಲಿ ಹೋಗುತ್ತಾ ಇರತಕ್ಕಂಥ ರಸ್ತೆನಲ್ಲಿ ಅಡ್ಡಗಟ್ಟಿ ಕೊಲೆ ಮಾಡಿದ್ದಾರೆ. ಅದೇ ರೀತಿ ಚಿಂತಾಮಣಿಯಿಂದ ಬಾಗೇಪಲ್ಲಿಗೆ ಹೋಗುವ ರಸ್ತೆಯಲ್ಲೂ ಕೂಡ ಅಡ್ಡಗಟ್ಟಿ ಕೊಲೆ ಮಾಡಿದ್ದಾರೆ. ನಿನ್ನೆ ಭೀಕರವಾದಂತಹ ರೀತಿಯಲ್ಲಿ ಇಬ್ಬರನ್ನೂ ಒಂದೇ ವೇಳೆಯಲ್ಲಿ ಎಂದರೆ 7-8 ರ ಸಮಯದಲ್ಲಿ ಕೊಲೆ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದನ್ನು ಅಲ್ಲಿರತಕ್ಕ ಪೋಲಿಸಿನವರ ಗಮನಕ್ಕೂ ತಂದಿದ್ದೇವೆ, ಆದರೆ ಇದುವರೆವಿಗೂ ಸರ್ಕಾರ ಇದರ ಬಗ್ಗೆ ಯಾವ ರೀತಿಯ ಕ್ರಮವನ್ನು ಕೈಗೊಂಡಿಲ್ಲ. ನಾಣಯ್ಯನವರೇ ದಯವಿಟ್ಟು ಈ ಕಡೆ ಗಮನಹರಿಸಿ, ಈ ಪ್ರಶ್ನೆಗೆ ತಾವೇ ಉತ್ತರಿಸಬೇಕು.

ಅಧ್ಯಕ್ಷರು : ಗೃಹಮಂತ್ರಿಗಳು ಇದ್ದಾರಲ್ಲಾ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಏನಾಗಿದೆ ಎಂದರೆ ಎಲ್ಲಾ ಸದಸ್ಯರ ಗಮನ ಇರುವುದು ನಾಣಯ್ಯನವರ ಕಡೆ, ಸಂಬಂಧಪಟ್ಟ ಮಂತ್ರಿಗಳು ಇದ್ದರೂ ಸಹಿತ ಸದಸ್ಯರುಗಳ ಗಮನ ಅವರ ಕಡೆ, ಮಾನ್ಯ ನಾಣಯ್ಯನವರು ಅಷ್ಟೇ, ಮಂತ್ರಿಗಳಿದ್ದರೂ ಸಹಿತ ನೀವು ಕುಳಿತುಕೊಳ್ಳಿ ನಾನು ಉತ್ತರ ಹೇಳುತ್ತೇನೆ ಎನ್ನುವ ಹಾಗೆ ಮಾಡಿ, ಇವತ್ತು ಎಲ್ಲಾ ಸದಸ್ಯರಿಗೂ ನಾಣಯ್ಯನವರೇ ಬೇಕು ಎನ್ನುವಂತಾಗಿದೆ.

ಅಧ್ಯಕ್ಷರು : ನನಗಂತೂ ಸದಾ ಹಸನ್ಮುಖರಾಗಿರುವ ಅವರು ನನ್ನ ಎದುರಿಗೆ ಇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಶೂನ್ಯ ವೇಳೆಯಲ್ಲಿ 20 ಜನರು ಎತ್ತಿದಂಥ ಪ್ರಶ್ನೆಗಳಿಗೆ 20 ನಿಮಿಷದಲ್ಲಿ ಉತ್ತರವನ್ನು ಕೊಟ್ಟದ್ದಾರೆ ಅದು ಎಷ್ಟರಮಟ್ಟಿಗೆ ಪರಿಹಾರವಾಗುತ್ತಿವೆ ಎಂಬುದನ್ನು ನೋಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಹೀಗಾಗಿ ಕೋಲಾರ ಜಿಲ್ಲೆಯಲ್ಲಿ ಇದೊಂದು ವ್ಯಾಪಕವಾದ ಸಮಸ್ಯೆಯಾಗಿದೆ. ಚಿಕ್ಕಬಳ್ಳಾಪುರ ಉಪವಿಭಾಗದಲ್ಲಂತೂ ಬಹಳ ಗಂಭೀರವಾದಂತಹ ಪರಿಸ್ಥಿತಿ. ಕೋಲಾರ ಉಪವಿಭಾಗದ ರಾಯಲ್‌ಪಾಡ್ ರಸ್ತೆಯಲ್ಲಿ ಐದಾರು ಕೊಲೆಗಳನ್ನು ಮಾಡಿದ್ದಾರೆ. ಆದರೆ ಇದುವರೆವಿಗೂ ಕೂಡ ಪೋಲಿಸಿನವರು ಯಾರನ್ನು ಹಿಡಿದಿಲ್ಲ, ಕೇಸ್ ದಾಖಲು ಮಾಡಿದ್ದಾರೆಯೇ ಹೊರತು ಯಾರನ್ನೂ ಪತ್ತೆ ಹಚ್ಚಿಲ್ಲ. ಅಲ್ಲಿ ಶಿಕ್ಷಕರನ್ನು ಕೊಲೆ ಮಾಡಿದ್ದಾರೆ, ದಂಪತಿಗಳ ಮೇಲೆ ಹಲ್ಲೆ ಮಾಡಿದ್ದಾರೆ. ಏನು ಇದರ ಬಗ್ಗೆ ವರದಿ ತರಿಸಿದ್ದೀರಿ, ಇದಕ್ಕೆ ಕಾರಣ ಏನು ಎಂದು ಹುಡುಕಿದ್ದೀರಿ ಸರ್ಕಾರ ದಯವಿಟ್ಟು ಅದನ್ನು ಹೇಳಬೇಕು. ಇದು ಬಹಳ ವ್ಯಾಪಕವಾಗಿ ನಡೆಯುತ್ತಿದೆ. ಸಂಜೆ ಏಳು ಗಂಟೆಯ ನಂತರ ಯಾರು ದ್ವಿಚಕ್ರ ವಾಹನದಲ್ಲಿ ಓಡಾಡಲಿಕ್ಕೆ ಆಗದಂಥ ಪರಿಸ್ಥಿತಿ ಇದೆ. ಅಡ್ಡಗಟ್ಟಿ ಕೊಲೆ ಮಾಡುತ್ತಾರೆ, 10 ರೂಪಾಯಿಯನ್ನು ದೋಚಿ ಕೊಂಡು ಹೋಗುತ್ತಾರೆ. ಚಿಕ್ಕಬಳ್ಳಾಪುರ ಉಪವಿಭಾಗದ ಪೋಲೀಸರಂತೂ ಸಂಪೂರ್ಣ ನಿಷ್ಕ್ರಿಯರಾಗಿದ್ದಾರೆ. ಏನು ಕೆಲಸ ಮಾಡುತ್ತಾ ಇಲ್ಲ. ಸರ್ಕಾರ ಇದರ ಬಗ್ಗೆ ಸೂಕ್ತ ಮಾಹಿತಿಯನ್ನು ಕೊಡಬೇಕು. ಮತ್ತು ಸಂಜೆ ವೇಳೆಯಲ್ಲಿ ಓಡಾಡುವ ಜನರಿಗೆ ಯಾವ ರೀತಿಯ ಭದ್ರತೆಯನ್ನು ಸರ್ಕಾರ ಕೊಡುತ್ತದೆಂದು ಹೇಳಬೇಕು.

ಶ್ರೀ ಆರ್. ರೋಷನ್ ಬೇಗ್ : ಸನ್ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಚಿಕ್ಕಬಳ್ಳಾಪುರ ಉಪವಿಭಾಗದಲ್ಲಿ ನಡೆದಿರತಕ್ಕಂಥ ಘಟನೆಗಳು ಸರ್ಕಾರದ ಗಮನಕ್ಕೆ ಬಂದಿವೆ. ನಿನ್ನೆ ಡಿ.ಜಿ.ಪಿ. ಶ್ರೀನಿವಾಸುಲುರವರು ಹೋಗಿ ಅಲ್ಲಿ ಸುತ್ತಮುತ್ತಲಿನ ಸ್ಟಾರ್ ನೋಡಿಕೊಂಡು ಅಲ್ಲಿನ ಅಧಿಕಾರಿಗಳೊಂದಿಗೆ ಮೀಟಿಂಗ್ ಮಾಡಿಕೊಂಡು ಬಂದಿದ್ದಾರೆ. ಬರೀ ಚಿಕ್ಕಬಳ್ಳಾಪುರ ಒಂದೇ ಅಲ್ಲದೆ ಶ್ರೀನಿವಾಸಪುರ, ಕೋಲಾರದ ಹೈವೇಗಳಿಗೆ ಒಂದು ಜಿಗ್‌ಜಾಗ್ ಪೆಟ್ರೋಲಿಂಗ್ ಮಾಡಬೇಕೆಂದು ಅಲ್ಲಿಗೆ 18 ಜೀಪ್‌ಗಳನ್ನು ಕಳುಹಿಸಿದ್ದೇವೆ. ಡಿ.ಸಿ.ಪಿ. ಕೂಡ ಭೇಟಿ ನೀಡಿ ಬಂದಿದ್ದಾರೆ. ಕೆಲವು ವೈಟಲ್ ಕ್ಲ್ಯೂ ಸಿಕ್ಕಿದೆ ಅದರ ಆಧಾರದ ಮೇಲೆ ತನಿಖೆ ನಡೆಯುತ್ತಿದೆ.

ಅಧ್ಯಕ್ಷರು : ಶ್ರೀನಿವಾಸಪುರದಲ್ಲಿ ಇನ್ಸ್‌ಪೆಕ್ಟರ್‌ಗಳಿಗೆ, ಸಬ್-ಇನ್ಸ್‌ಪೆಕ್ಟರ್‌ಗಳಿಗೆ ಜೀಪ್ಸ್ ಕೊಟ್ಟಿಲ್ಲ, ಕೊಟ್ಟಿರುವ ಜೀಪ್‌ಗಳು ಹೋಗತಕ್ಕ ಸ್ಥಿತಿಯಲ್ಲಿ ಇಲ್ಲ. ಆದುದರಿಂದ ಅವರಿಗೆ ತಕ್ಷಣ ಹೊಸ ಜೀಪ್ಗಳ ವ್ಯವಸ್ಥೆಯನ್ನು ಮಾಡಿ.

ರ) ಸಂತೆಮಾರನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ 12.5 ಎಂ.ವಿ. ಟ್ರಾನ್ಸ್ ಫಾರ್ಮರ್ ಅಳವಡಿಸುವುದು.

ಶ್ರೀ ಎ.ಆರ್. ಕೃಷ್ಣಮೂರ್ತಿ (ಕಡೂರು) : ಸನ್ಮಾನ್ಯ ಅಧ್ಯಕ್ಷರೆ, ಇಂದಿನ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ಕ್ಷೇತ್ರದಲ್ಲಿನ ವಿದ್ಯುತ್ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ನಮ್ಮ ಕ್ಷೇತ್ರದಲ್ಲಿ 66.11 ಕೆ.ವಿ.ಯ ಉಪಕೇಂದ್ರವನ್ನು ಪ್ರಾರಂಭಿಸಬೇಕೆಂದು ಈ ಸದನದಲ್ಲಿ ನಾನು 1986 ರಲ್ಲೇ ಕೇಳಿಕೊಂಡಿದ್ದೆ, ಅದಕ್ಕೆ ಆಂದಿನ ಉಪ ಮುಖ್ಯಮಂತ್ರಿಗಳು ಲಿಖಿತ ಮೂಲಕ ಉತ್ತರವನ್ನು ಸಹ ಕೊಟ್ಟಿದ್ದರು, 1996ರ ಡಿಸೆಂಬರ್‌ಗೆ ಪೂರ್ಣಗೊಳಿಸುತ್ತೇವೆ ಎಂದು ಹೇಳಿದ್ದರು. ಆದರೆ ಅದು ಇದುವರೆವಿಗೂ ಪೂರ್ಣಗೊಂಡಿಲ್ಲ. ಇವತ್ತು ಉಪಕೇಂದ್ರವನ್ನು ಪೂರ್ಣಗೊಳಿಸುವ ಹಂತದಲ್ಲಿ, ಚಾರ್ಜ್ ಮಾಡುವ ಹಂತದಲ್ಲಿ ಟ್ರಾನ್ಸ್‌ಫಾರ್ಮರ್ ಹೆಚ್ಚು ಕಡಿಮೆ ಸಿಡಿದು ಹೋಗಿದೆ. From tech-